ಪ್ರಿನ್ಸಿಪಾಲ್ ವಿ.ಕೃ. ಗೋಕಾಕ, ಪ್ರೊ. ಸೇತುರಾಮ ಮಳಗಿ, ಪ್ರೊ. ಸ.ಸ. ಮಾಳವಾಡ, ಪ್ರೊ. ಡಬ್ಲ್ಯೂ.ಡಬ್ಲ್ಯೂ.ಎಸ್. ಭಾಸ್ಕರ್, ಪ್ರೊ. ಸಿ.ಎಸ್. ಕಡ್ಡಿಪುಡಿ, ಪ್ರೊ. ಸುಶೀಲಾ ಗುಂಜೀಕರ, ಪ್ರೊ. ಎಂ.ಎಸ್. ಪಾಟೀಲ ಅವರಂಥವರ ಗಮನ ಸೆಳೆಯಲು ಸಾಧ್ಯವಾಗಿತ್ತು.

ವೈಯಕ್ತಿಕವಾಗಿ ನನಗೆ ಗಿರಡ್ಡಿ ಮತ್ತು ಹೆಗಡೆ ಬಹಳ ಸಹಾಯ ಮಾಡುತ್ತಿದ್ದರು. ಆಗಿನ ಸಮಗ್ರ ವಾತಾವರಣ ಇಂಗ್ಲಿಷ್‌ಮಯವಾಗಿರುತ್ತಿತ್ತು. ದಿನಾಲೂ ಇಂಗ್ಲಿಷ್ ಪತ್ರಿಕೆ, ಕಾದಂಬರಿಗಳನ್ನು ಓದಲು ಪ್ರಯತ್ನಿಸುತ್ತಿದ್ದೆವು. ಇಂಗ್ಲಿಷ್ ಶೈಲಿ ಮತ್ತು ಭಾಷೆಯ ಆಕರ್ಷಣೆಯಿಂದಾಗಿ ಆರ್.ಕೆ. ಕರಂಜಿಯಾ ಅವರ 'ದಿ ಬ್ಲಿಜ್' ಮತ್ತು ಅದರಲ್ಲಿ ಬರುತ್ತಿದ್ದ ಖ್ವಾಜಾ ಅಹ್ಮದ್ ಅಬ್ಬಾಸ್ ಅವರ 'ದಿ ಲಾಸ್ಟ್ ಪೇಜ್' ತಪ್ಪದೇ ಓದುತ್ತಿದ್ದೆವು. 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ' ಮತ್ತು 'ದಿ ಟೈಮ್ಸ್ ಆಫ್ ಇಂಡಿಯಾ' ಪಿಎಂನ ಪ್ರೀತಿಯ ಪತ್ರಿಕೆಗಳಾಗಿದ್ದವು. ಪಿಎಂನ ಇಂಗ್ಲಿಷ್ ಓದು, ಆಸಕ್ತಿ ಕಂಡು ನಾವಿಬ್ಬರೂ ಬೆರಗಾಗುತ್ತಿದ್ದೆವು. ಆ ಆಸಕ್ತಿಯ ಫಲವಾಗಿ ಎರಡನೆಯ ವರ್ಷದಿಂದ ನಾವು ಮೂವರೂ ಕಾಲೇಜಿನ ಗ್ರಂಥಾಲಯದಲ್ಲಿ ಪ್ರತಿ ದಿನ ನಿಯಮಿತವಾಗಿ ಸಂಜೆಯ ವರೆಗೆ ಒಂದು ಸ್ಥಳದಲ್ಲಿ ಕುಳಿತು ಓದಲಾರಂಭಿಸಿದೆವು. ಅಲ್ಲಿ ನಮ್ಮ ಹೋಂವರ್ಕ್ ಜೊತೆಗೆ ಜನರಲ್ ರೀಡಿಂಗ್ ಸಹ ಮಾಡುತ್ತಿದ್ದೆವು. ನಾನು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದ ಬಗ್ಗೆ ಹೆಚ್ಚು ತಿಳಿಯಲು ಅವರಿಬ್ಬರೂ ನೆರವಾಗಿದ್ದರು. ಲೈಬ್ರರಿಯ ಒಂದು ಮೂಲೆಯಲ್ಲಿ ನಾವು ಕೂಡುತ್ತಿದ್ದ ಟೇಬಲ್‌ಗೆ ಸಾಮಾನ್ಯವಾಗಿ ಬೇರೆ ಯಾರೂ ಕೂಡುತ್ತಿದ್ದಿಲ್ಲ. ಅಷ್ಟರ ಮಟ್ಟಿಗೆ ನಮ್ಮ ತ್ರಿವಳಿ ಮತ್ತು ಟೇಬಲ್ ಹೆಸರಾಗಿತ್ತು.

ನಾವು ದಿನಾ ಸಂಜೆ ಕೂಡಿಕೊಂಡು ಪೇಟೆಗೆ ಹೋಗುತ್ತಿದ್ದೆವು. ಗಿರಡ್ಡಿಗೆ ಹಳೆಯ ಪುಸ್ತಕ ಕೊಳ್ಳುವ ಚಟ. ಅದು ನನಗೂ ಅಂಟಿತ್ತು. ನಾವು ಮೊದಲು ಮೋಡಕಾ ಬಜಾರಕ್ಕೆ ಹೋಗುತ್ತಿದ್ದೆವು. ಆ ದಿನಗಳಲ್ಲಿ ಅಲ್ಲಿ ಹಾಗೂ ಸ್ವಲ್ಪ ಮಟ್ಟಿಗೆ ಹಾಲಗೆರೆಯ ದಂಡೆಯ ಮೇಲೆ ಒಂದೆರಡು ಕಡೆ ಮಾತ್ರ ಹಳೆಯ ಪುಸ್ತಕ ಸಿಗುತ್ತಿದ್ದುವು. ಗಾಂಧೀಚೌಕದಲ್ಲಿದ್ದ ಕುಲಕರ್ಣಿ ಬುಕ್ ಡಿಪೋದಲ್ಲಿ ಹಳೆಯ ಪಠ್ಯಪುಸ್ತಕಗಳು ಮಾತ್ರ ಸಿಗುತ್ತಿದ್ದುವು. ಗಿರಡ್ಡಿ ಕನ್ನಡ, ಇಂಗ್ಲಿಷ್ ಎರಡೂ ಭಾಷೆಯ ಪುಸ್ತಕ ಕೊಳ್ಳುತ್ತಿದ್ದ. ಪುಸ್ತಕ ಮಾರುವವರ ಜೊತೆ ಅವನು ಮಾಡುವ ವಾಟಾಕಟಿ, ಜಿಕೇರಿ ಬಹಳ ಸ್ವಾರಸ್ಯಕರವಾಗಿರುತ್ತಿತ್ತು. ಆ ಪುಸ್ತಕಗಳಲ್ಲಿ ಬೆಲೆ ನಮೂದಿಸಿದ ಪುಟ ಹರಿದಿರುತ್ತಿತ್ತು. ಅಂಥದರ ಬೆಲೆ ಕಟ್ಟುವುದು ಗಿರಡ್ಡಿಗೆ ಮಾತ್ರ ಗೊತ್ತಿದ್ದ ಕಲೆಯಾಗಿತ್ತು. ಬೇರೆ ಊರಿಗೆ ಹೋದಾಗ ಸಹ ಅವನು ಇಂಥ ಹಳೆಯ ಪುಸ್ತಕಗಳಿಗಾಗಿ ತಡಕಾಡುವ ಅಭ್ಯಾಸ ಇಟ್ಟುಕೊಂಡಿದ್ದ. ಈ ರೀತಿ ಅವನು ಅಪರೂಪದ ಪುಸ್ತಕಗಳನ್ನು ಸಂಗ್ರಹಿಸಿದ್ದಾನೆ. ಸಂಖ್ಯೆ ಮತ್ತು ಮಹತ್ವದ ದೃಷ್ಟಿಯಿಂದ ಧಾರವಾಡದಲ್ಲಿ ಗಿರಡ್ಡಿಯ ಮನೆಯಲ್ಲಿ ಇದ್ದಷ್ಟು ಕನ್ನಡ, ಇಂಗ್ಲಿಷ್ ಪುಸ್ತಕ, ಪತ್ರಿಕೆಗಳ ವಿಶೇಷ ಸಂಚಿಕೆಗಳು ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ, ಯಾವುದೇ ಸಾಹಿತಿ ಅಥವಾ ಪ್ರಾಧ್ಯಾಪಕರ ಮನೆಯಲ್ಲಿ ಇಲ್ಲ. ಅವುಗಳನ್ನು ಇಟ್ಟುಕೊಳ್ಳಲೆಂದೇ ಅವನು ತನ್ನ ಮನೆಯಲ್ಲಿ ಅಟ್ಟದ ಮೇಲಿನ ಪೂರ್ಣ ಭಾಗವನ್ನು ಕಟ್ಟಿಸಿಕೊಂಡ, ತನ್ನ ಓದುಕೊಠಡಿ, ಮಂಚವನ್ನೂ ಅಲ್ಲೇ ಹಾಕಿಸಿಕೊಂಡ. ಎಲ್ಲ ಪುಸ್ತಕಗಳಿಗೆ ತಾನೇ ರಟ್ಟು ಹಾಕಿಸಿಕೊಂಡು ಅಥವಾ ಬೈಂಡ್ ಮಾಡಿಸಿಕೊಂಡು ಜತನದಿಂದ ಕಾಪಾಡಿಕೊಂಡಿದ್ದ. ಯಾರಿಗಾದರೂ ವಿರಳ ಪುಸ್ತಕವೊಂದು ಬೇಕಿದ್ದರೆ ನಾವು ಅವನ ಕಡೆಗೇ ಕಳಿಸುತ್ತಿದ್ದೆವು. ಗಿರಡ್ಡಿ ಶಿಸ್ತಿನಿಂದ ಒಂದು ರಜಿಸ್ಟರ್ ಮಾಡಿದ್ದ, ಅದರಲ್ಲಿ ಬರೆದುಕೊಂಡು, ಅವರು ಪುಸ್ತಕ ಮರಳಿಸುವ ದಿನವನ್ನೂ ಅವರಿಗೆ ಮತ್ತೆ ನೆನಪಿಸಿ, ನಮೂದಿಸಿಕೊಳ್ಳುತ್ತಿದ್ದ. ಯಾರಿಗೂ ಇಲ್ಲ ಎನ್ನುತ್ತಿದ್ದಿಲ್ಲ.

ಮೋಡಕಾಬಜಾರದ ಅನಂತರ ನಾವು ಟಿ.ಡಿ. ಶಿವಲಿಂಗಯ್ಯನವರ ಸಾಹಿತ್ಯಮಂದಿರಕ್ಕೆ ಹೋಗುತ್ತಿದ್ದೆವು. ಅಲ್ಲಿ ಸಿಗುವ ಹೊಸ ಪುಸ್ತಕಗಳನ್ನು ಆಯ್ದು ಅಲ್ಲಿ ಹೋದಾಗೊಮ್ಮೆ ಒಂದನ್ನಾದರೂ ಕೊಳ್ಳುವುದು, ತಕ್ಷಣ ಅದರ ಮೇಲೆ ತನ್ನ ಹೆಸರು ಬರೆದುಕೊಳ್ಳುವುದು ಪಿ.ಎಂ. ಹೆಗಡೆಯ